

'ರತ್ನನ್ ಪ್ರಪಂಚ'
ಧನಂಜಯ್, ಉಮಾಶ್ರೀ

ಸಿನಿಮಾವನ್ನು ಉಳಿಸಿಕೊಂಡು ಕೊನೆಗೆ ಚಿತ್ರಮಂದಿರಗಳ ಪಟ್ಟಿ ವಿಸ್ತರಿಸುತ್ತ ಹೋಗುವ 'ಶೆಟ್ಟರ ಮಾರುಕಟ್ಟೆ ತಂತ್ರ' ಇಲ್ಲಿ ಫಲಿಸಿತು. ಮೊದಲ ಮೂರು ನಾಲ್ಕು ದಿನ ಸೋಷಿಯಲ್ ಮೀಡಿಯಾಗಳಲ್ಲಿ ಸಿನಿಮಾ ಬಗ್ಗೆ ಪಾಸಿಟಿವ್ ಮಾತುಗಳೇ ಕೇಳಿಬರುವಂತೆ ಮಾಡಿದ ವ್ಯವಸ್ಥಿತ ಪ್ರಚಾರ ವಿನ್ಯಾಸ, ರಿಷಭ್ ಮತ್ತು ರಾಜ್ ಅವರ ಪ್ರಚಾರ ಪ್ರವಾಸ, ಉಘೇ ಉಘೇ ಎಂದ ಪತ್ರಿಕಾ ವಿಮರ್ಶೆಗಳು – ಎಲ್ಲವೂ ಸಿನಿಮಾ ಬಗ್ಗೆ ಜನರಲ್ಲಿ ಚರ್ಚೆ ಹುಟ್ಟುಹಾಕಲು ಯಶಸ್ವಿಯಾಯಿತು; ಬಾಯಿಮಾತಿನ ಪ್ರಚಾರವನ್ನೂ ಗಿಟ್ಟಿಸಿಕೊಂಡು ಚಿತ್ರಮಂದಿರಗಳು ಎರಡನೇ ವಾರವೂ ತುಂಬತೊಡಗಿದವು. ನಂತರ ಸೋಷಿಯಲ್ ಮೀಡಿಯಾದಲ್ಲಿ ಸಿನಿಮಾದಲ್ಲಿನ ಕ್ರೌರ್ಯದ ಬಗ್ಗೆ, ಮಾದೇಶ್ವರನ ಹಾಡಿನ ಬಗ್ಗೆ ನಡೆದ ಪರ–ವಿರೋಧದ ಬಿಸಿಬಿಸಿ ಚರ್ಚೆಗಳೂ ಸಿನಿಮಾಗೆ ಪ್ಲಸ್ ಪಾಯಿಂಟ್ ಆಗಿಯೇ ಒದಗಿಬಂದವು.

ಒಂದು ಕಲಾಕೃತಿಯಾಗಿ ಈ ಸಿನಿಮಾ ಯಶಸ್ವಿಯಾಗಿದೆಯೇ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ಜನರು ಈ ಸಿನಿಮಾವನ್ನು ಮೆಚ್ಚಿ ನೋಡಿದ್ದಂತೂ ನಿರಾಕರಿಸಲು ಸಾಧ್ಯವಿರಲಿಲ್ಲ. ಸ್ಟಾರ್ ನಟರ ಬಿಲ್ಡಪ್ ಮೆರವಣಿಗೆಯೇ ಕಮರ್ಷಿಯಲ್ ಸಿನಿಮಾ ಎಂಬ ಭಾವ ಇನ್ನೂ ಬಲವಾಗಿ ಬೇರೂರಿರುವ ಚಂದನವನಕ್ಕೆ, ಯಾವ ಸ್ಟಾರ್ ನಟನೂ ಇಲ್ಲದ, ಹಾಸ್ಯವುಕ್ಕಿಸುವ ಪಾತ್ರಗಳ ಮೂಲಕವೇ ಗುರ್ತಿಸಿಕೊಂಡಿದ್ದ ಸಿನಿಮಾವೊಂದರ ಗೆಲುವು ಒಂದು ರೀತಿಯಲ್ಲಿ ಔಷಧಿಯೇ ಹೌದು. ಆದರೆ ಈ ಗೆಲುವಿನ ಹಿಂದೆ ಅಮಲಾಗಿ ಕೆಲಸ



'ಗರುಡ ಗಮನ ವೃಷಭ ವಾಹನ' ಸಿನಿಮಾದಲ್ಲಿ ರಾಜ್ ಶೆಟ್ಟಿ

ಮಾಡಿದ್ದ ಸಿನಿಮಾದೊಳಗಿನ ಕ್ರೌರ್ಯ, ಅದನ್ನು ರಿಯಲಿಸ್ಟಿಕ್‌ಗೊಳಿಸಿದ ರೀತಿಯನ್ನು ಗಮನಿಸಿದರೆ ಇದು ಡೇಟ್‌ಬಾರ್ ಆಗಿರುವ ಅಪಾಯಕಾರಿ ಮಾತ್ರೆಯೇನೋ ಎಂಬ ಅನುಮಾನವನ್ನು ಸಹೃದಯರಲ್ಲಿ ಹುಟ್ಟಿಸಿದರೂ ಅಚ್ಚರಿಯಿಲ್ಲ. ಅವೇನೇ ಇದ್ದರೂ ಸಿನಿಮಾ ಕರ್ನಾಟಕದಾದ್ಯಂತ ಬೇರೆ ಬೇರೆ ಭಾಗಗಳಲ್ಲಿ 'ಚಿತ್ರಮಂದಿರ ತುಂಬಿದೆ' ಫಲಕವನ್ನು ಬಾಗಿಲಲ್ಲಿ ಊರಿಸಿತು. ಹಲವು ಕಾರಣಗಳಿಗೆ ನಿರ್ದೇಶಕರಿಗಷ್ಟೇ ಅಲ್ಲ, ಚಿತ್ರರಂಗಕ್ಕೂ ಇದು ಅಗತ್ಯವೇ ಆಗಿದ್ದ ಗೆಲುವಾಗಿತ್ತು.

ಈ ನಡುವೆ ನಿರ್ದೇಶಕ ಸುನಿ, ತಮ್ಮ ನಿರ್ದೇಶನದ ಎರಡು ಸಿನಿಮಾಗಳನ್ನು ಒಂದರ ಹಿಂದೆ ಇನ್ನೊಂದು ಬಿಡುಗಡೆ ಮಾಡಲು ಸಜ್ಜಾಗಿದ್ದರು. ಗಣೇಶ್ ಅಂಧನಾಗಿ ನಟಿಸಿದ್ದ, ಟ್ರೇಲರ್ ಮೂಲಕವೇ ಕುತೂಹಲ ಕೆರಳಿಸಿದ್ದ 'ಸಖತ್' ನವೆಂಬರ್ 26ಕ್ಕೆ ಬಿಡುಗಡೆಯಾಯಿತು. ಭರ್ಜರಿ ಓಪನಿಂಗ್ ಅನ್ನೇನೂ ಪಡೆದುಕೊಳ್ಳದಿದ್ದರೂ ಗಣೇಶ್ ಅಭಿಮಾನಿಗಳು ಪೂರ್ತಿಯಾಗಿ ಈ ಸಿನಿಮಾದ ಕೈಬಿಡಲಿಲ್ಲ. ಮಿನಿಮಮ್ ಗ್ಯಾರಂಟಿ ಮನರಂಜನೆ ಕೊಡುವ ನಿರ್ದೇಶಕ ಸುನಿಯ ಮೇಲಿನ ನಂಬಿಕೆಯೂ ಇದಕ್ಕೆ ಕಾರಣವಿರಬಹುದು. ಹಾಗಾಗಿ ನಿರ್ಮಾಪಕರ ಥೈಲಿಯನ್ನು ತುಳುಕಿಸದಿದ್ದರೂ, ಬಂಡವಾಳಕ್ಕೇನೂ ಮೋಸವಿಲ್ಲದ ಹಾಗೆ ದುಡಿದ 'ಸಖತ್' ಮೆಲ್ಲಗೆ ಹಿಂದೆ ಸರಿಯಿತು.

ಡಿ. 3ಕ್ಕೆ ಮತ್ತೊಂದು ಸ್ಟಾರ್ ನಟನ ಮಾಸ್ ಸಿನಿಮಾ ತೆರೆಗೆ ಬಂತು. 'ಅಯೋಗ್ಯ' ಸಿನಿಮಾ ಕಂಡಿದ್ದ ಮಹೇಶ್ ಕುಮಾರ್ ನಿರ್ದೇಶನದ, ಶ್ರೀಮುರಳಿ ನಟನೆಯ 'ಮದಗಜ' ಸಿನಿಮಾ ಹೊರಗೆ ಸೌಂಡು ಮಾಡಿದಷ್ಟು ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಲಿಲ್ಲ. ಬರೀ ಹೀರೊಯಿಸಂ ಮೆರೆದಾಟ, ಕೃಶ ಪಾತ್ರಪೋಷಣೆಯ ಈ ಸಿನಿಮಾಕ್ಕೆ ಮೊದಲ ಮೂರು ದಿನಗಳಲ್ಲಿ ಮುರಳಿ ಅಭಿಮಾನಿಗಳ ಪಡೆ ಬಿಟ್ಟರೆ ಮಿಕ್ಕವರು ಹೋಗಿದ್ದು ವಿರಳವೇ.

## ಬರುವವರು ಗೆಲ್ಲುವರೆ?

'ಸಖತ್' ಸಿನಿಮಾದಲ್ಲಿ ಸಿಕ್ಕ ಸಾಧಾರಣ ಗೆಲುವನ್ನು ಭರ್ಜರಿ ಗೆಲುವಾಗಿಸಿಕೊಳ್ಳುವ ಹುಮ್ಮಸ್ಸಿನಲ್ಲಿ ಸಿಂಪಲ್ ಸುನಿ, 'ಅವತಾರ ಪುರುಷ'ನ ಬಿಡುಗಡೆಗೆ ಸಜ್ಜಾಗಿದ್ದಾರೆ. ಶರಣ್ ಅವರ ಟೈಮಿಂಗ್ ಮತ್ತು ಸುನಿ ಬರವಣಿಗೆಯ ಪಂಚಿಂಗ್ ಎರಡೂ ಸೇರಿ ಪ್ರೇಕ್ಷಕನ ಎದೆಯಲ್ಲಿ ಕಚಗುಳಿ ಇಡುವುದೇ ಕಾದು ನೋಡಬೇಕು. ಡಿ. 10ಕ್ಕೆ ಬಿಡುಗಡೆ ಆಗಬೇಕಿದ್ದ ಈ ಸಿನಿಮಾ ಮುಂದಕ್ಕೆ ಹೋಗಿದೆ.

ಒಟಿಟಿಯಲ್ಲಿ ಬಿಡುಗಡೆಯಾಗಿ ಸಾಕಷ್ಟು ಮೆಚ್ಚುಗೆ ಗಳಿಸಿದ್ದ ಮಲಯಾಳಂನ 'ದೃಶ್ಯಂ 2' ಸಿನಿಮಾದ ಕನ್ನಡ ಅವತರಣಿಗೆಯೂ ಡಿ. 10ರಂದೇ ಬಿಡುಗಡೆಯಾಗಲಿದೆ.

ಇನ್ನು ಈ ವರ್ಷಾಂತ್ಯಕ್ಕಂತೂ ಸಿನಿಮಾಗಳ ಸಿಡಿ ಪಟಾಕಿ ಹೊತ್ತಿಕೊಳ್ಳುವ ಎಲ್ಲ ಲಕ್ಷಣಗಳೂ ಇವೆ. ವಿಭಿನ್ನ ಪ್ರಚಾರದ ಮೂಲಕ ಗಮನಸೆಳೆಯುತ್ತಿರುವ ಧನಂಜಯ್ ನಿರ್ಮಿಸಿ ನಟಿಸುತ್ತಿರುವ 'ಬಡವ ರ್‍ಯಾಸ್ಕಲ್', ನಿಖಿಲ್ ಕುಮಾರಸ್ವಾಮಿ ಗೆಲುವಿನ ಮರೀಚಿಕೆಯನ್ನು ಹಿಡಿಯುವ ಯತ್ನದಲ್ಲಿ ಹುಟ್ಟಿಕೊಂಡಿರುವ 'ರೈಡರ್', ರಕ್ಷಿತ್ ಶೆಟ್ಟಿ ಅಭಿನಯದ ಬಹುನಿರೀಕ್ಷಿತ 'ಚಾರ್ಲಿ 777' ಈ ಮೂರೂ ಸಿನಿಮಾಗಳೂ ವರ್ಷಾಂತ್ಯಕ್ಕೆ ಸಿನಿಮಾ ಸಂಭ್ರಮ ಒದಗಿಸಲು ಜೋರು ಸಿದ್ಧತೆ ನಡೆಸಿವೆ.

## ಮತ್ತೆ ಕೊರೊನಾ ಕರಿನೆರಳು

ಚಿತ್ರರಂಗ ನಿಧಾನಕ್ಕೆ ಚೇತರಿಸಿಕೊಂಡು ಚೇತೋಹಾರಿ ನಗು ಬೀರುತ್ತಿರುವ ಹಾಗೆಯೇ ನೆತ್ತಿ ಮೇಲೆ ಮತ್ತೆ ಕಾರ್ಮೋಡ ದಟ್ಟೈಸುತ್ತಿವೆ. 'ಓಮೈಕ್ರಾನ್' ಎಂಬ ಮತ್ತೊಂದು ವಿಚಿತ್ರ ಹೆಸರಿನಲ್ಲಿ ಕೊರೊನಾ ಮತ್ತೆ ಹೊಸ್ತಿಲಿಗೇ ಬಂದು ನಿಂತಾಗಿದೆ. ಯಾವ ಕ್ಷಣದಲ್ಲಿ ಚಿತ್ರಮಂದಿರಗಳಿಗೆ ನಿರ್ಬಂಧ ಬೀಳಬಹುದು ಹೇಳುವುದು ಕಷ್ಟ. ಈಗ ಬಿಡುಗಡೆಯಾಗಬೇಕಿರುವ ಸಿನಿಮಾಗಳೆಲ್ಲವೂ ನಿರ್ಬಂಧದ ಆತಂಕದಿಂದ ಹಿಂದೆ ಸರಿದರೂ ಅಚ್ಚರಿಯಿಲ್ಲ. ಡಿಸೆಂಬರ್ ಅಂತ್ಯಕ್ಕಂತೂ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂಬ ಮಾತುಗಳು ಕೇಳುತ್ತಿವೆ. ಅದೇನಾದರೂ ನಿಜವೇ ಆದರೆ ಚಂದನವನದ ಮಂದಿ 'ಓ ಮೈ ಗಾಡ್' ಎಂದು ಎದೆ ಮೇಲೆ ಕೈಯಿಟ್ಟುಕೊಂಡು ಮೇಲೆ ನೋಡುತ್ತ ಮತ್ತೊಂದು ಮಧ್ಯಂತರಕ್ಕೆ ಸಿದ್ಧಗೊಳ್ಳಬೇಕಷ್ಟೆ. ಯಾವುದೇ ಸಿನಿಮಾಗೆ ಕ್ಲೈಮ್ಯಾಕ್ಸ್‌ನಲ್ಲಿ ಇಂಟರ್‌ವಲ್ ಕೊಟ್ಟರೆ ಏನಾಗುತ್ತದೆ ಎಂದು ಬಿಡಿಸಿ ಹೇಳಬೇಕಿಲ್ಲವಷ್ಟೆ.

ಪ್ರತಿಕ್ರಿಯಿಸಿ: feedback@sudha.co.in